(ಇ) ಈವರೆಗೆ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸದೇ ಇರುವುದಕ್ಕೆ ಕಾರಣಗಳೇನು;

(ಈ) ಯಾವ ಕಾಲಮಿತಿಯೊಳಗೆ ಸರ್ಕಾರ ಕಾಲೇಜನ್ನು ಪ್ರಾರಂಭಿಸಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ಹೌದು.

(ಆ) ಸರ್ಕಾರದ ಆದೇಶ ಹೊರಡಿಸಲಾಗಿದೆ.

(ಇ) ಅನ್ವಯಿಸುವುದಿಲ್ಲ.

(ಈ) 2007–08ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

1082(1466) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮುಳವಾಡ ಏತ ನೀರಾವರಿಯ ಯೋಜನೆಯ ಪೂರ್ವ ಮತ್ತು ಪಶ್ಚಿಮ ಕಾಲುವೆಯಡಿ ಬರುವಂತಹ ಹೊಲಗಾಲುವೆಗಳ ಒಟ್ಟು ವಿಸ್ತೀರ್ಣ ಎಷ್ಟು;

(ಆ) ಈ ಮುಳವಾಡ ಏತ ನೀರಾವರಿ ಯೋಜನೆಯಡಿ ಬರತಕ್ಕಂತಹ ಎಲ್ಲಾ ಹೊಲಗಾಲುವೆಗಳ ನಿರ್ಮಾಣ ಕೆಲಸವು ಮುಕ್ತಾಯಗೊಂಡಿದೆಯೇ;

(ಇ) ಮುಳವಾಡ ಏತ ನೀರಾವರಿ ಯೋಜನೆಯಡಿ ಬರುವಂತಹ ಹೊಲಗಾಲುವೆಗಳ ನಿರ್ಮಾಣ ಕೆಲಸ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಯಾವ ಕಾರಣಗಳಿಗಾಗಿ ಈ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಗಿಸಲಾಗಲಿಲ್ಲ;

(ಉ) ಬಾಕಿ ಇರುವ ಕಾಮಗಾರಿಗಳನ್ನು ಯಾವ ನಿರ್ದಿಷ್ಟ ಕಾಲದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಜಲ ಸಂಪನ್ಮೂಲ ಸಚಿವರು)

(ಅ) ಮುಳವಾಡ ಏತ ನೀರಾವರಿ ಯೋಜನೆ ಅಡಿ ಬರುವ ಹೊಲಗಾಲುವೆ ಕ್ಷೇತ್ರವು ಈ ಕೆಳಗಿನಂತಿವೆ;

1) ಪೂರ್ವ ಕಾಲುವೆ – 5, 169.60 ಹೆ. (ಯೋಜಿತ ಕ್ಷೇತ್ರ 5,000 ಹೆ.)
2) ಪಶ್ಚಿಮ ಕಾಲುವೆ – 20, 475.00 ಹೆ. (ಯೋಜಿತ ಕ್ಷೇತ್ರ 25,850 ಹೆ.)
ಒಟ್ಟು ಕ್ಷೇತ್ರ – 25, 644.60 ಹೆ. (ಯೋಜಿತ ಕ್ಷೇತ್ರ 30, 850 ಹೆ.)

(ಆ) ಮುಳವಾಡ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆ ಅಡಿ 3,590 ಹೆಕ್ಟೇರ್ ಕ್ಷೇತ್ರದ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 1,579 ಹೆಕ್ಟೇರ್ ಕ್ಷೇತ್ರದ ಕಾಮಗಾರಿ ಪ್ರಗತಿಯಲ್ಲಿದೆ. ಇದರ ಪೈಕಿ ವಿತರಣಾ ಕಾಲುವೆ ಸಂ.1ರ ಲ್ಯಾಟರಲ್ 3ರಲ್ಲಿ 290 ಹೆಕ್ಟೇರ್ ಮತ್ತು ವಿತರಣಾ ಕಾಲುವೆ ಸಂ.6ರ 1,154.47 ಹೆಕ್ಟೇರ್ ಕ್ಷೇತ್ರದಲ್ಲಿ ಕೆಲಸವನ್ನು ಏಪ್ರಿಲ್ ತಿಂಗಳಿನಲ್ಲಿ ಆರಂಭಿಸಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಉಳಿದ 135.13 ಹೆಕ್ಟೇರ್ ಕ್ಷೇತ್ರದಲ್ಲಿ ಮುಕ್ತಾಯ ಹಂತದಲ್ಲಿದೆ.

ಪಶ್ಚಿಮ ಕಾಲುವೆಯಡಿ 13,688 ಹೆಕ್ಟೇರ್ ಕ್ಷೇತ್ರದ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 4,037.83 ಹೆಕ್ಟೇರ್ ಕ್ಷೇತ್ರದ ಕಾಮಗಾರಿಯು ಪ್ರಗತಿಯಲ್ಲಿವೆ. 2,749 ಹೆಕ್ಟೇರ್ ಪ್ರದೇಶದಲ್ಲಿ ಹೊಲಗಾಲುವೆ ಕಾಮಗಾರಿ ಕೈಗೊಳ್ಳಲು ಬಾಕಿ ಉಳಿದಿರುವುದು.

(ಇ) ಬಂದಿದೆ.

(ಈ) ಪಶ್ಚಿಮ ಕಾಲುವೆ ವಿತರಣಾ ಕಾಲುವೆ ಸಂ.7, 19, 37 ಮತ್ತು 41ರಲ್ಲಿಯ ಹೊಲಗಾಲುವೆ ಕಾಮಗಾರಿಗಳು ಹೆಚ್ಚಾಗಿ ಕಬ್ಬು ಇರುವ ಜಮೀನುಗಳಲ್ಲಿ ಬಂದಿರುತ್ತದೆ, ಇದೂ ಅಲ್ಲದೆ, ರೈತರು ಕಾಲುವೆ ದಾಟಲು ಹೆಚ್ಚಿನ ಬಂಡಿ ದಾರಿಗಳನ್ನು ನಿರ್ಮಿಸಲು ಒತ್ತಾಯಿಸುತ್ತಿದ್ದು, ಇವುಗಳ ತಾಂತ್ರಿಕ ಪರಿಶೀಲನೆಗಾಗಿ ಕಾಲಾವಕಾಶ ತೆಗೆದುಕೊಳ್ಳಬೇಕಾಗಿದ್ದರಿಂದ ಕಾಮಗಾರಿಗಳು ಮಧ್ಯದಲ್ಲಿ ಸ್ಥಗಿತಗೊಂಡಿದ್ದವು.

ಇದೂ ಅಲ್ಲದೆ, ವಿತರಣಾ ಕಾಲುವೆಗಳ, ಲ್ಯಾಟರಲ್‌ಗಳ ಮತ್ತು ತೂಬುಗಳ ಕೆಲಸಗಳ ನಿರ್ಮಾಣಕ್ಕೆ ಅನುಗುಣವಾಗಿ ಸಮಾನಾಂತರವಾಗಿಯೇ ಹೊಲಗಾಲುವೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ.

ವಿಳಂಬಕ್ಕೆ ಕಾರಣವಾದ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿಕೊಂಡು, ಬಾಕಿ ಉಳಿದ ಹೊಲಗಾಲುವೆ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

1083 (1467) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮುಳವಾಡ ಏತ ನೀರಾವರಿ ಯೋಜನೆಯ ಪಶ್ಚಿಮ ಕಾಲುವೆಯಡಿ ಬರತಕ್ಕಂತಹ ಡಿಸ್ಟ್ರಿಬ್ಯೂಟರ್ ಸಂ.7ರ ಒಟ್ಟು ವಿಸ್ತೀರ್ಣ ಎಷ್ಟು;